## ವಿಶ್ವ ರಂಗ ಸಂದೇಶ ೨೦೨೧

ಪ್ರಸ್ತುತ ಕಾಲವು ನೇರಾಭಿವ್ಯಕ್ತಿಯ ಕಲಾಮಾಧ್ಯಮಗಳಿಗೆ ಅತ್ಯಂತ ವಿಷಮಪರಿಸ್ಥಿತಿಯನ್ನು ತಂದೊಡ್ಡಿದೆ. ಮೊದಲಿಂದಲೂ ಅನಿಶ್ಚಿತತೆಯೇ ತುಂಬಿರುವ ಈ ಮಾಧ್ಯಮಗಳಲ್ಲಿ ಕಲಾವಿದರು, ತಂತ್ರಜ್ಞರು, ಕುಶಲಕರ್ಮಿಗಳು ಸ್ತ್ರೀ ಪುರುಷರಾದಿಯಾಗಿ ಎಲ್ಲರಿಗೂ ಸಂಕಷ್ಟವೊದಗಿದ್ದು ಹೌದು. ಬಹುಶಃ ಇಂತಹ ನಿತ್ಯ ಅನಿಶ್ಚಿತತೆಯೇ ಈ ಮಹಾಪಿಡುಗಿನಿಂದ ಪಾರಾಗಿ ಬದುಕುಳಿಯಲು ಅವರಿಗೆ ಸಮಯೋಚಿತವಾದ ತಿಳಿವು ಸ್ಥೈರ್ಯವನ್ನು ಕೊಟ್ಟಿದೆಯೇನೋ !

ಈ ಅಪೂರ್ವ ಸಂದರ್ಭದಲ್ಲಿ, ಅವರ ಕಲ್ಪನಾಶಕ್ತಿಯು ಅನೇಕ ಸೃಷ್ಟ್ಯಾತ್ಮಕ, ಮನರಂಜಕ, ಹೃದಯಸ್ಪರ್ಶಿ ಅವತಾರಗಳನ್ನು ಈಗಾಗಲೇ ತಾಳಿದೆ; ಅಂತರ್ಜಾಲದ ಸಹಾಯವಿದ್ದೇ ಇದೆ.

ಭೂಮಿಗೆ ಬಂದಾಗಿನಿಂದ ಮಾನವರ ನಡುವೆ ಪರಸ್ಪರ ಕಥೆಗಳ ವಿನಿಮಯ ನಡೆದೇ ಇದೆ. ಈ ಸುಂದರ ರಂಗಕಲಾಸಂಪ್ರದಾಯ ನಾವು ಇರುವವರೆಗೂ ಇದ್ದೇ ಇರುತ್ತದೆ.

ರಚನೆ, ವಿನ್ಯಾಸ, ನೃತ್ಯ, ಸಂಗೀತ, ಅಭಿನಯ, ಹಾಡುಗಾರಿಕೆ, ನಿರ್ದೇಶನ - ಈ ಕಲಾಪ್ರಕಾರಗಳ ಕಲಾವಿದರ ಚೋದಕಶಕ್ತಿಯನ್ನು ಹತ್ತಿಕ್ಕುವುದು ಅಸಾಧ್ಯ. ಸಧ್ಯದಲ್ಲೇ ಅದು, ನಮ್ಮೆಲ್ಲರ ಸಹಬಾಳ್ವೆಯನ್ನು ಹೊಸದಾಗಿ ಅರ್ಥೈಸಿ, ಹೊಸ ಹುರುಪಿನೊಂದಿಗೆ ಮತ್ತೆ ಪ್ರವರ್ಧಮಾನಕ್ಕೆ ಬರುವುದರಲ್ಲಿ ಸಂದೇಹವಿಲ್ಲ.

ನಾನು ಕಾತರಳಾಗಿದ್ದೇನೆ.

ಹೆಲೆನ್ ಮಿರೇನ್<br>ರಂಗಭೂಮಿ, ಚಲನಚಿತ್ರ, ಕಿರುತೆರೆ ಕಲಾವಿದೆ



ಹೆಲೆನ್ ಮಿರೇನ್  ತನ್ನ ಬಹುಮುಖಿ ಪ್ರಭಾವೀ ಕಾರ್ಯಶೈಲಿಯಿಂದ ಜಗದ ಮನ್ನಣೆ ಗಳಿಸಿರುವ ಅಂತರರಾಷ್ಟ್ರೀಯ ಕಲಾವಿದೆ. ದ ಕ್ವೀನ್ ಚಿತ್ರಕ್ಕಾಗಿ ೨೦೦೭ ರಲ್ಲಿ ಅಕಾಡೆಮಿ ಪ್ರಶಸ್ತಿ ಪುರಸ್ಕೃತರು.

ಕನ್ನಡಕ್ಕೆ: ರಶ್ಮಿ ಗುಂಡಪ್ಪ